**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>**

**<u>ಸಿಸಿ ನಂ. 497/2018</u>**

**<u>ಚಾಸಾ-4/ಪಿಡಬ್ಲೂ-6</u>**

| | |
|---|---|
| **ಹೆಸರು** | ಶ್ರೀಶೈಲ |
| **ತಂದೆ ಹೆಸರು** | ಶಿವಶರಣಪ್ಪ |
| **ವಯಸ್ಸು** | 43 ವರ್ಷಗಳು |
| **ಉದ್ಯೋಗ** | ಮುಖ್ಯ ಪೇದೆ |
| **ವಾಸ ಸ್ಥಳ** | ನೆಲೋಗಿ |

**<u>ದಿನಾಂಕ 25-11-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

2016 ರಿಂದ 2021ರವರೆಗೆ ನೆಲುಗಿ ಪೊಲೀಸ ಠಾಣೆಯಲ್ಲಿ ಪೊಲೀಸ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01-07-2018 ರಂದು ಮಧ್ಯಾಹ್ನ 01-10ರ ಸುಮಾರಿಗೆ ಚಾಸಾ-1ರವರು ನನಗೆ ಮತ್ತು ಚಾಸಾ-2 ರಿಂದ 8ರವರಿಗೆ ಹೇಳಿದೇನೆಂದರೆ ಇಟಗಾ ಗ್ರಾಮದ ಭೀಮಾ ನಂದಿಯಿಂದ ಅಕ್ರಮವಾಗಿ ಟ್ರಾಕ್ಟರಗಳ ಮುಖಾಂತರ ಮರಳನ್ನು ತೆಗೆದು ಸಂಗ್ರಹಣ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಚಾಸಾ-1, ನಾನು ಮತ್ತು ಚಾಸಾ-5 ರಿಂದ 8 ವಿಷಯ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ರವರನು ಬರಮಾಡಿಕೊಂಡು ಸಿಬ್ಬಂದಿಯಾದ ಚಾಸಾ-1 ರಿಂದ 3 ಮತ್ತು 5 ರಿಂದ 8ರವರು ಸೇರಿ ಮಧ್ಯಾಹ್ನ 01.15 ಗಂಟೆಗೆ ಗುನ್ನೆ ಸ್ದಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಟ್ರಾಕ್ಟರನಲ್ಲಿ ಮರಳು ತುಂಬುತಿದ್ದು. ನಮ್ಮ ಸಮವಸ್ತ್ರದಲ್ಲಿ ಇದ್ದದ್ದನ್ನು ನೋಡಿ ಎಲ್ಲರು ಓಡಿ ಹೋದರು. ಅವರನ್ನು ಹಿಡಿಯಲು ಪ್ರಯತ್ನಿಸಿದೆವು ಆದರೆ ಅವರು ಸಿಗಲಿಲ್ಲ. ನಂತರ ಚಾಸಾ-2 ಮತ್ತು 3ರವರ ಸಮಕ್ಷಮ ಸ್ಥಳ ಪರಿಶಿಲನೆ ಮಾಡಿ ನೋಡಲಾಗಿ, ಇಟಗಾ ಗ್ರಾಮದ ಗೈರಾಣಿ ಸರ್ವೆ ನಂಬರ 01ರಲ್ಲಿ ಅಕ್ರಮ ವಾಗಿ ಸುಮಾರು 90 ಟೀಪ್ಪರನಷ್ಟು ಮರಳನ್ನು ಸಂಗ್ರಹಣೆ ಮಾಡಿದ್ದು ಕಂಡು ಬರುತ್ತದೆ. ನಂತರ ಚಾಸಾ-1ರವರು, ಸದರಿ ಮರಳನ್ನು ಪಂಚರ ಸಮಕ್ಷಮ ಮಧ್ಯಾಹ್ನ 01.30 ರಿಂದ 02-15ರವರೆಗೆ ಪಂಚನಾಮೆ ಜರುಗಿಸಿ ಮರಳನ್ನು ವಶಪಡಿಸಿಕೊಳ್ಳಲಾಯಿತು. ವಶಪಡಿಸಿಕೊಂಡ ಮರಳಿನ ಅಂದಾಜು ಮೌಲ್ಯ ರೂಪಾಯಿ 3,60,000/- ಇರುತ್ತದೆ. ನಂತರ ಓಡಿ ಹೋದ ವ್ಯಕ್ತಿಗಳ ಹೆಸರು ಉಮೇಶ ತಂದೆ ಲಕ್ಷ್ಮಣ ಅಣ್ಣೂರ ಮತ್ತು ಸುನೀಲ ಹಿಪ್ಪರಗಿ ಎಂದು ತಿಳಿದು ಬಂದಿರುತ್ತದೆ. ನಂತರ ಚಾಸಾ-1ರವರು ಚಾಸಾ-11ರವರಿಗೆ ಮುಂದಿನ ಕ್ರಮಕ್ಕಾಗಿ ಠಾಣೆಗೆ ಬಂದು ಎಸ್.ಹೆಚ್.ಓ. ರವರಿಗೆ ವರದಿ, ಪಂಚನಾಮೆ

ಮುಂದಿನ ಕ್ರಮಕ್ಕಾಗಿ ನೀಡಲಾಯಿತು. ದಿನಾಂಕ 01-07-2018ರಂದು ಘಟನೆಯ ಕುರಿತು ಚಾಸಾ-11ರವರಿಗೆ ಹೇಳಿಕೆ ನೀಡಿರುತ್ತೇನೆ. ದಿನಾಂಕ 19-07-2018ರಂದು ಆರೋಪಿ ನಂಬರ 1 ಮತ್ತು 2 ಗುರುತಿಸುವ ಬಗ್ಗೆ ತನಿಖಾಧಿಕಾರಿಗಳಿಗೆ ಮರು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಆರೋಪಿತರನುನ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುನ್ನೆಗೆ ಬಳಸಿದ ಟ್ರಾಕ್ಟರ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು. ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ</u>

ಚಾಸಾ-1ರವರು ಮತ್ತು ಅವರ ಸಿಬ್ಬಂದಿಗಳು ಮಾತ್ರ ಗುನ್ನೆಯ ಸ್ಥಳಕ್ಕೆ ಹೋಗಿರುತ್ತಾರೆ. ನಂತರ ನಾನು ಮತ್ತು ಚಾಸಾ-4ರವರು 12.30ಕ್ಕೆ ಗುನ್ನೆ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ-2 ಮತ್ತು 3ರವರನ್ನು ಚಾಸಾ-1ರವರು ಕರೆಸಿರುತ್ತಾರೆ. ಆರೋಪಿಗಳು ಯಾವ ಸಾಧನೆಗಳು ಮೂಲಕ ಮರಳನ್ನು ತುಂಬುತ್ತಿದ್ದರು ಎಂದರೆ ಸಾಕ್ಷಿಯು ನಮ್ಮನ್ನು ಕಂಡ ಕೂಡಲೇ ಆರೋಪಿತರು ಟ್ರಾಕ್ಟರ ಸಮೇತ ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಿ 90 ಟಿಪ್ಪರನಷ್ಟು ಮರಳನ್ನು ಸಂಗ್ರಹಿಸಿದ್ದಾರೆಂದು ಬರೆಯಿಸಿದ್ದು ಅದನ್ನು ಒಂದು ಅಂದಾಜಿನ ಮೇಲೆ ಹೇಳಿರುತ್ತೇವೆ. ನಾನು ನಮ್ಮ ಸಿಬ್ಬಂದಿಗಳೊಂದಿಗೆ ಗುನ್ನೆ ಸ್ಥಳಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅಕ್ರಮವಾಗಿ ಮರಳನ್ನು ಸಂಗ್ರಹಣೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4ರ ಟ್ರಾಕ್ಟರನ ಟ್ರೆಲರಗಳಲ್ಲಿ ಮರಳು ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಇಲಖಾಯ ಸಿಬ್ಬಂದಿಗಳು ಘಟನೆಯ ನಂತರ ಪೊಲೀಸರು ಟ್ರಾಕ್ಟರನ್ನು ಠಾಣೆಗೆ ಕರೆಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ